ಶ್ರೀ ಎನ್. ಚಿಕ್ಕೇಗೌಡ:- ಅದನ್ನು ಪರಿಶೀಲಿಸೋಣ.

ಶ್ರೀ ಬಿ. ಶಿವರಾಮು:- ಉಪಾಧ್ಯಕ್ಷಣಿಯರೆ, ಈಗ ವಿಶ್ವ ಬ್ಯಾಂಕ್‌ನ ನೆರವನ್ನು ತೆಗೆದುಕೊಂಡಿದ್ದೇವೆ ಎನ್ನತಕ್ಕ ಮಾತನ್ನು ಮಂತ್ರಿಗಳು ಹೇಳಿದ್ದಾರೆ. ಬಹುಶಃ ಎಷ್ಟು ಕಡೆಗಳಿಂದ ಹಣವನ್ನು ತೆಗೆದುಕೊಂಡು ಬಂದಿದ್ದಾರೆ ಎಂದು ನನಗೆ ಗೊತ್ತಿಲ್ಲ. ನನ್ನ ಪ್ರಶ್ನೆ ಏನೆಂದರೆ, ಹಿಂದೆ ಉಳಿದಿರತಕ್ಕ ಕೆಲಸವೇನು ಇದೆ, ಆ ಬಾಕಿ ಕೆಲಸವನ್ನು ಮುಗಿಸಿಕೊಂಡು ನಂತರ ಮುಂದಿನ ಕೆಲಸಕ್ಕೆ ಏಕೆ ಹೋಗಬಾರದು? ಹಂತ ಹಂತವಾಗಿ ೯ ವರ್ಷಕ್ಕೆ ಒಂದು ಮೈಕ್ರೋ ವಾಟರ್‌ಶೆಡ್ ಎಂದು ಮಾಡಿಕೊಂಡಿದ್ದಾರೆ. ಮೊದಲ ೪ ವರ್ಷದಲ್ಲಿ ೪ ಮೈಕ್ರೋ ವಾಟರ್‌ಶೆಡ್ ಅನ್ನು ಕಂಪ್ಲೀಟ್ ಮಾಡಿ ಮಧ್ಯದಲ್ಲಿ ೩ನ್ನು ಬಿಟ್ಟು ಕೊನೆಯಲ್ಲಿ ಎರಡನ್ನು ಮಾಡುವುದಕ್ಕಿಂತ ಮುಂಚೆ ೪ನ್ನು ಮಾಡಿಯಾದಮೇಲೆ ನಂತರ ೫-೬-೭ಕ್ಕೆ ಕೆಲಸವನ್ನು ಮಾಡದೆ ಫೀಡ್ ಬ್ಯಾಕ್ ವರ್ಕ್ ಆಗಿ ಇಷ್ಟು ಕೆಲಸ ಆಗಬೇಕೆಂದು ಮಾಡಿದ್ದರೂ, ವಿಶ್ವಬ್ಯಾಂಕಿನಿಂದ ಹಣವನ್ನು ತೆಗೆದುಕೊಂಡು ಅದನ್ನು ಕಂಪ್ಲೀಟ್ ಮಾಡಿದ ನಂತರ ಮುಂದೆ ಹೋದರೆ ಹೇಗಿರುತ್ತದೆ? ಏಕೆ ಇದರ ಬಗ್ಗೆ ಗಮನ ಹರಿಸಿಲ್ಲ ಅಥವಾ ಇದಕ್ಕೆ ಇರತಕ್ಕ ತೊಂದರೆ ಏನು? ತಾಂತ್ರಿಕವಾದ ತೊಂದರೆ ಏನಾದರೂ ಇದೆಯೇ ಇದರ ಬಗ್ಗೆ ಮಂತ್ರಿಗಳು ದಯಮಾಡಿ ತಿಳಿಸಬೇಕು.

ಶ್ರೀ ಎ. ಎಂ. ಬೆಳ್ಳಿಯಪ್ಪ:- ಟೆಕ್ನಿಕಲ್ ಪ್ರಾಬ್ಲಮ್ ಏನೂ ಇಲ್ಲ, ವಿಟಮಿನ್ ಪ್ರಾಬ್ಲಮ್ ಒಂದೇ ಇರುವುದು.

ಶ್ರೀ ಬಿ. ಶಿವರಾಮು:- ವಿಶ್ವ ಯೋಜನೆಗೆ ಹಣ ಕೊಟ್ಟಿದೆಯೆಂದು ಹೇಳಿದ್ದೀರಿ, ಅದನ್ನು ಮಾಡಬಹುದಲ್ಲ.

(ಉತ್ತರ ಇಲ್ಲ)

ರಾಜ್ಯದ ಮೀನುಗಾರರ ಕುಟುಂಬಗಳಿಗೆ ಕೇಂದ್ರ ಸರ್ಕಾರದ ಸಹಾಯ

ಚುಕ್ಕೆ ಗುರ್ತಿನ ಪ್ರಶ್ನೆ ಸಂಖ್ಯೆ ೩೫೦ (೧೬೪೪) ಶ್ರೀ ಎಂ. ರುಕ್ಮಯ್ಯ ಪೂಜಾರಿ (ವಿಟ್ಲ)ಪರವಾಗಿ ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ):- ಮಾನ್ಯ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲ ಸಾರಿಗೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ರಾಜ್ಯದಲ್ಲಿ ಮೀನುಗಾರರ ಕುಟುಂಬಗಳಿಗೆ ಕೇಂದ್ರ ಸರ್ಕಾರದ ಸಹಾಯದಿಂದ ಮೀನುಗಾರಿಕೆ ವಸತಿ ಯೋಜನೆಯನ್ವಯ ಎಷ್ಟು ಮನೆಗಳನ್ನು ಕಟ್ಟಲ್ಪಟ್ಟಿದೆ?

ಆ) ತಮಿಳುನಾಡು ಹಾಗೂ ಕೇರಳ ರಾಜ್ಯಗಳಿಗೆ ಈ ಉದ್ದೇಶಕ್ಕಾಗಿ ಕೇಂದ್ರದಿಂದ ಸಾಕಷ್ಟು ಸಹಾಯಧನ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ೧೯೯೬-೯೭ರಲ್ಲಿ ರಾಜ್ಯಕ್ಕೆ ಕೇಂದ್ರದಿಂದ ಅನುದಾನ ಬಂದಿದೆಯೇ?

ಈ) ಬಂದಿದ್ದರೆ ಅದನ್ನು ಎಲ್ಲಿ ಉಪಯೋಗಿಸಲಾಗಿದೆ.

ಶ್ರೀ ಎ. ಎಂ. ಬೆಳ್ಳಿಯಪ್ಪ (ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ರಾಜ್ಯ ಮಂತ್ರಿಗಳು).:-

ಅ) ಕೆಂದ್ರ ಪುರಸ್ಕೃತ ರಾಷ್ಟ್ರೀಯ ಮೀನುಗಾರರ ಕ್ಷೇಮಾಭಿವೃದ್ಧಿ ನಿಧಿ ಯೋಜನೆಯಡಿಯಲ್ಲಿ ಈವರೆಗೆ ಮೀನುಗಾರರ ಕುಟುಂಬದವರಿಗೆ ೩೦೦ ಮನೆಗಳನ್ನು ನಿರ್ಮಿಸಲಾಗಿದೆ

ಆ) ಇಲ್ಲ.

ಇ) ಇಲ್ಲ.

ಈ) ಉದ್ಭವಿಸುವುದಿಲ್ಲ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಶ್ರೀ ಎ. ರುಕ್ಮಯ್ಯ ಪೂಜಾರಿಯವರ ಪರವಾಗಿ):- ಮಾನ್ಯ ಮಂತ್ರಿಗಳು ಕೊಟ್ಟಂತಹ ಉತ್ತರದಲ್ಲಿ ೩೦೦ ಮನೆಗಳನ್ನು ನಿರ್ಮಿಸಲಾಗಿದೆಯೆಂದು ಹೇಳಿದ್ದೀರಿ. ಆದರೆ ಆ ೩೦೦ ಮನೆಗಳಲ್ಲಿ ಕರಾವಳಿಯಲ್ಲಿ ಕಟ್ಟಿದಂತಹ ನಿದರ್ಶನಗಳಿಲ್ಲ. ಏಕೆಂದರೆ ಜಿಲ್ಲಾಪರಿಷತ್ತಿನ ವತಿಯಿಂದ ದಕ್ಷಿಣ ಕನ್ನಡದ ಜಿಲ್ಲಾಪರಿಷತ್ತಿನಲ್ಲಿ ಕೆಲವುಕಡೆ ಅಪ್ಲಿಕೇಷನ್ಸ್ ಕಾಲ್‌ಫಾರ್ ಮಾಡಿದ್ದೀರಿ, ಆದರೆ ಮನೆ ಕಟ್ಟಿ ಕೊಟ್ಟಿಲ್ಲ. ಆದ್ದರಿಂದ ತಾವು ಎಲ್ಲಿ ಮನೆ ಕಟ್ಟಿದ್ದೀರಿ ಎನ್ನುವ ವಿಚಾರ ಹೇಳಬೇಕಾಗಿದೆ.

ಶ್ರೀ ಎ. ಎಂ. ಬೆಳ್ಳಿಯಪ್ಪ:- ಈ ೩೦೦ ಮನೆಗಳಲ್ಲಿ ಹುಣಸೂರು ತಾಲ್ಲೂಕಿನ ಪಂಜೆ ಹಳ್ಳಿಯಲ್ಲಿ ೧೦೦ ಮನೆಗಳನ್ನು ಕಟ್ಟಿದ್ದೇವೆ, ಶ್ರೀರಂಗಪಟ್ಟಣದ ಅರಕೆರೆಯಲ್ಲಿ ೧೦೦ ಮನೆಗಳನ್ನು ಕಟ್ಟಿದ್ದೇವೆ, ಕೊಳ್ಳೇಗಾದಲ್ಲಿ ೧೦೦ ಮನೆಗಳನ್ನು ಕಟ್ಟಿದ್ದೇವೆ. ಶಹಾಪುರ ತಾಲ್ಲೂಕಿನ ಅಲಾಗ್‌ಸೂರ್‌ನಲ್ಲಿ ೧೦೦ ಮನೆಗಳನ್ನು ಕಟ್ಟುವುದಕ್ಕೆ ಪ್ರಾರಂಭ ಮಾಡಿದ್ದೇವೆ. ಶಿವಮೊಗ್ಗಾದ ಬಸವರಾಜಪುರದಲ್ಲಿ ಸಹ ೧೦೦ ಮನೆಗಳನ್ನು ಕಟ್ಟುವುದಕ್ಕೆ ಪ್ರಾರಂಭ ಮಾಡಿದ್ದೇವೆ. ಕೊಳ್ಳೇಗಾಲದ ಮುಳ್ಳೂರಿನಲ್ಲಿ ಪುನಃ ೧೦೦ ಮನೆಗಳನ್ನು ಕಟ್ಟುವುದಕ್ಕೆ ಸ್ಯಾಂಕ್ಷನ್ ಮಾಡಿದ್ದೇವೆ. ಅದಕ್ಕೆ ಫೈನಾನ್ಸ್ ಡಿಪಾರ್ಟ್‌ಮೆಂಟ್‌ನಿಂದ ಮತ್ತು ಪ್ಲಾನಿಂಗ್ ಡಿಪಾರ್ಟ್‌ಮೆಂಟ್‌ನಿಂದ ಅಪ್ರೂವಲ್ ಬಂದಿಲ್ಲ. ಹೀಗಾಗಿ ನಾವು ಒಟ್ಟು ೬೦೦ ಮನೆಗಳನ್ನು ಕಟ್ಟುವುದಕ್ಕೆ ತೀರ್ಮಾನ ತೆಗೆದುಕೊಂಡು ಆ ರೀತಿ ಮಾಡುತ್ತಿದ್ದೇವೆ. ಮಾನ್ಯ ಸದಸ್ಯರು ಈ ಕಡಲ ತೀರದಲ್ಲಿ ಏತಕ್ಕೋಸ್ಕರ ಮನೆಗಳನ್ನು ಕಟ್ಟಿಲ್ಲ, ಅರ್ಜಿಗಳನ್ನು ಕೊಟ್ಟರೂ ಸಹ ನೀವು ಕಟ್ಟಿಲ್ಲವೆಂದು ಕೇಳುತ್ತಿದ್ದಾರೆ. ಹಿಂದೆ ಇದೇ ಸದನದಲ್ಲಿ ಹೇಳಿದ್ದೇನೆ. ಈ ಮನೆಗಳನ್ನು ಕಟ್ಟುವುದಕ್ಕೆ ನಾರ್ಮ್ಸ್ ಇದೆ. ಆ ನಾರ್ಮ್ಸ್ ಏನೆಂದರೆ, ಅವರಿಗೆ ಸ್ವಂತವಾದ ಜಾಗವಿರಬೇಕು. ಆ ಒಂದು ಸ್ವಂತವಾದ ಜಾಗ ಇಲ್ಲದ ಕಾರಣ ಈ ಒಂದು ಕೆಲಸವನ್ನು ಮಾಡಲಿಲ್ಲ. ಆದರೆ ಮಾನ್ಯ ಸ್ನೇಹಿತರಿಗೆ ನಾನು ಅಶ್ಯೂರೆನ್ಸ್ ಮಾಡುತ್ತಿದ್ದೇನೆ. ಈ ವರ್ಷ ಇದೇ ಯೋಜನೆಯಲ್ಲಿ ಸುಮಾರು ಒಂದು ಸಾವಿರ ಮನೆಗಳನ್ನು ಕಟ್ಟುವುದಕ್ಕೆ ಯೋಜನೆ ಹಾಕಿಕೊಂಡಿದ್ದೇವೆ. ಈ ಮನೆಗಳನ್ನು ಕಟ್ಟುವಂತಹ ಸಂದರ್ಭದಲ್ಲಿ ನಿಮ್ಮ ಉತ್ತರ ಕನ್ನಡ ಜಿಲ್ಲೆ ಮತ್ತು ದಕ್ಷಿಣ ಕನ್ನಡ ಜಿಲ್ಲೆಗೆ ಕನಿಷ್ಟ ಪಕ್ಷ ೩೦೦-೪೦೦ ಮನೆಗಳನ್ನಾದರೂ ಕೊಡಬೇಕೆಂದು ಒಂದು ತೀರ್ಮಾನವನ್ನು ತೆಗೆದುಕೊಳ್ಳುತ್ತೇವೆಂದು ಹೇಳುತ್ತಿದ್ದೇನೆ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ:- ತಮ್ಮ ಆಶ್ವಾಸನೆಗೆ ಧನ್ಯವಾದಗಳು. ಈಗ ತಾವೇನು ೩೦೦ ಮನೆಗಳನ್ನು ಕಟ್ಟಿದ್ದೀರಿ ಮತ್ತು ೩೦೦ ಮನೆಗಳನ್ನು ಕಟ್ಟುತ್ತಿದ್ದೀರಿ, ಇವುಗಳಲ್ಲಿ ಮೀನುಗಾರರ ವ್ಯಾಪ್ತಿಯಲ್ಲಿ ಬಂದಿರಬಹುದು. ಆದರೆ ಕರಾವಳಿ ಪ್ರದೇಶದ ಯಾವ ಕ್ಷೇತ್ರದಲ್ಲಿ ಅಥವಾ ಯಾವ ಗ್ರಾಮದಲ್ಲಿ ಕಟ್ಟಿದಂತಹ ವಿಚಾರ ನಮಗೆ ಗೊತ್ತಾಗಲಿಲ್ಲ. ಅದನ್ನು ತಾವು ಹೇಳಲಿಲ್ಲ. ಆದರೆ ಇನ್ನು ಬಾಕಿ ಇರತಕ್ಕಂತಹ ಮನೆಗಳನ್ನು ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡದವರಿಗೆ ಕೊಡುತ್ತೇವೆಂದು

ತಾವು ಆಶ್ವಾಸನೆ ಕೊಟ್ಟಿದ್ದೀರಿ. ಆದರೆ ಅದರಲ್ಲಿ ಅವರದೇ ಆದ ಸ್ವಂತ ಸ್ಥಳವಿಲ್ಲವೆಂಬ ವಿಚಾರ ಹೇಳಿದ್ದೀರಿ. ಈಗಾಗಲೇ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕರಾವಳಿಯ ಕೆಲವು ಮಂಡಳಿಗಳಿಗೆ ಅರ್ಜಿಗಳು ಬಂದಿವೆ. ಅವುಗಳಿಗೆ ಬೇಕಾದಂತಹ ದಾಖಲಾತಿಗಳನ್ನು ಈಗಾಗಲೇ ಸಂಬಂಧಪಟ್ಟ ಇಲಾಖೆಯ ಪತಿಯಿಂದ ಜಿಲ್ಲಾಪರಿಷತ್ತಿನ ಮುಖಾಂತರ ಸರ್ಕಾರದ ಗಮನಕ್ಕೆ ಬಂದಿರಬಹುದು. ಆದರೆ ಸ್ಥಳವಿಲ್ಲ ಆದ್ದರಿಂದ ಕೊಟ್ಟಿಲ್ಲ ಎನ್ನುವಂಥಾದ್ದು ಸರಿಯಲ್ಲ. ತಾವು ಏನು ಕೊಡುತ್ತಿದ್ದೀರಿ, ಅದನ್ನು ಆದಷ್ಟು ಶೀಘ್ರವಾಗಿ ಕೊಡಿ. ಏಕೆಂದರೆ, ಒಂದು ಸಾರಿ ಸಂಬಂಧಪಟ್ಟ ದಾಖಲಾತಿಗಳೊಂದಿಗೆ ಅರ್ಜಿಯನ್ನು ಸಲ್ಲಿಸಿದ ಮೇಲೆ ಬೇರೆ ಯೋಜನೆಗಳ ಅನ್ವಯ ಅರ್ಜಿಯನ್ನು ಹಾಕುವುದಕ್ಕೆ ಆಗುವುದಿಲ್ಲ. ಆದ್ದರಿಂದ ತಮ್ಮ ಮೀನುಗಾರಿಕಾ ಇಲಾಖೆಯ ಪತಿಯಿಂದ ಕೊಡತಕ್ಕಂತಹ ಸೌಲಭ್ಯಗಳನ್ನು ಸ್ಪಷ್ಟವಾಗಿ ಹೇಳಬೇಕು, ಏಕೆಂದರೆ ಇದರ ಬಗ್ಗೆ ಗೊಂದಲವಿದೆ, ಅದು ಬರುತ್ತದೋ ಇಲ್ಲವೋ ಎನ್ನುವಂತಹ ಗೊಂದಲಗಳ ನಡುವೆ ಮೀನುಗಾರರು ಕಂಗಾಲಾಗುವಂತಹ ಪರಿಸ್ಥಿತಿ ಇದೆ. ಆದ್ದರಿಂದ ಸ್ಪಷ್ಟವಾಗಿ ಇಂಥಿಂಥ ತಾಲ್ಲೂಕುಗಳಲ್ಲಿ, ಕರಾವಳಿ ಪ್ರದೇಶದಲ್ಲಿ ಇಂತಿಷ್ಟು ಮನೆಗಳನ್ನು ಕೊಡುತ್ತೇವೆ ಎನ್ನುವ ಸ್ಪಷ್ಟ ಚಿತ್ರವನ್ನು ಕೊಟ್ಟರೆ ಮೀನುಗಾರರಿಗೆ ಇರತಕ್ಕಂತಹ ಗೊಂದಲ ಕಡಿಮೆಯಾಗುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ ಮತ್ತು ತಮ್ಮ ಅಭಿಪ್ರಾಯವನ್ನು ಈ ಸಂದರ್ಭದಲ್ಲಿ ಕೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎ. ಎಂ. ಬೆಳ್ಳಿಯಪ್ಪ:- ಸನ್ಮಾನ್ಯ ಅಧ್ಯಕ್ಷರೇ, ಈಗ ಹಲವಾರು ಸದಸ್ಯರುಗಳು ಹೇಳಿದ ಹಾಗೆ, ಫಿಷರೀಸ್ ಡಿಪಾರ್ಟ್‌ಮೆಂಟ್‌ನ ಅಸಿಸ್ಟೆಂಟ್ ಡೈರೆಕ್ಟರ್‌ಗಳಿಗೆ ನಾವು ಬರಹದ ಮೂಲಕ ಕಳುಹಿಸಿದ್ದೇವೆ. ಇದು ಏನೆಂದರೆ ಸಂಬಂಧಪಟ್ಟ ಶಾಸಕರು ಯಾರು ಯಾರು ಅರ್ಜಿಯನ್ನು ಕೊಟ್ಟಿದ್ದಾರೆ, ಇನ್ನು ಯಾರು ಕೊಡುತ್ತಾರೆ, ಅದನ್ನೆಲ್ಲಾ ವಿಚಾರ ಮಾಡಿ ಸ್ಯಾಟಿಸ್ಫಿಕ್ಸ್ ತೆಗೆದು ಯಾರಿಗೆ ಮನೆ ಇಲ್ಲ, ಯಾರಿಗೆ ಜಾಗ ಇಲ್ಲ, ಯಾರು ಫಿಶರ್‌ಮೆನ್ ಕೋಆಪರೇಟೀವ್ ಸೊಸೈಟಿಯಲ್ಲಿ ಮೆಂಬರ್ಸ್ ಆಗಿದ್ದಾರೆ, ಆ ತರಹ ಸ್ಯಾಟಿಸ್ಫಿಕ್ಸ್ ಕಳುಹಿಸಬೇಕು ಎಂದು ನಾವು ಒಂದು ಸುತ್ತೋಲೆ ಕಳುಹಿಸಿದ್ದೇವೆ. ಆ ಪ್ರಕಾರವಾಗಿ ಅಲ್ಲಿ ನಿಮ್ಮ ತಾಲ್ಲೂಕಿಗೆ ಸಂಬಂಧಪಟ್ಟ ಅಸಿಸ್ಟೆಂಟ್ ಡೈರಕ್ಟರ್ಸ್ ನಿಮ್ಮಲ್ಲಿ ಬಂದು ಕೇಳುತ್ತಾರೆ, ಆಗ ನೀವು ಅವರಿಗೆ ಸ್ಯಾಟಿಸ್ಫಿಕ್ಸ್ ಕೊಟ್ಟು ಅದಕ್ಕೆ ಸಹಕಾರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ:- ಸಹಕಾರ ಸಂಘದ ಸದಸ್ಯತ್ವವನ್ನು ಹೊಂದಿರಬೇಕೆಂದು ತಾವು ಹೇಳಿದಿರಿ. ಮಹಿಳೆಯರು ಆ ರೀತಿ ಸದಸ್ಯರಾಗುವುದಕ್ಕಾಗುವುದಿಲ್ಲ. ಯಾರು ಮೀನುಗಾರರು ಸಮುದ್ರದಲ್ಲಿ ದುಡಿಯುತ್ತಿದ್ದಾರೆ ಅವರು ಮಾತ್ರ ಸಹಕಾರ ಸಂಘದ ಸದಸ್ಯತ್ವ ಹೊಂದಿರುತ್ತಾರೆ ಒಂದು ವೇಳೆ ಭೂಮಿ ಅಂಥವರ ಮನೆಯ ಮಹಿಳೆಯರ ಹೆಸರನಲ್ಲಿದ್ದರೆ ಅಥವಾ ಅವರ ಹೆಂಗಸರ ಹೆಸರಿನಲ್ಲಿದ್ದರೆ ಅವರು ಈ ಸೌಲಭ್ಯದಿಂದ ವಂಚಿತವಾಗುವಂಥ ಸಾಧ್ಯತೆ ಇದೆ. ಆದುದರಿಂದ ಮೀನುಗಾರರ ಕುಟುಂಬದವರು ಸದಸ್ಯರಾಗಿರತಕ್ಕಂಥ ಸಂದರ್ಭದಲ್ಲಿ ಅವರಿಗೆ ಮನೆಗಳನ್ನು ಕಟ್ಟಿಸಿಕೊಡತಕ್ಕ ವ್ಯವಸ್ಥೆ ಮಾಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

ಶ್ರೀ ಎ. ಎಂ. ಬೆಳ್ಳಿಯಪ್ಪ:- ಈ ಯೋಜನೆ ಕೇಂದ್ರ ಸರ್ಕಾರದ ನೆರವಿನಿಂದ ಆಗತಕ್ಕದ್ದು. ಮನೆಗಳನ್ನು ಯಾವ ರೀತಿ ಕಟ್ಟಿಸಬೇಕು, ಯಾವರೀತಿ ಕಂಡೀಷನ್‌ಗಳನ್ನು ಪಾಲನೆ ಮಾಡಬೇಕೆಂದು ನಮಗೆ ಕೇಂದ್ರಸರ್ಕಾರದವು ತಿಳಿಸಿದ್ದಾರೆ. ಆ ರೀತಿಯಲ್ಲಿ ನಾವು ಅವರಿಗೆ

ಮನೆಗಳು ಇಲ್ಲದಿದ್ದರೆ ಅಥವಾ ಅವರಿಗೆ ಜಾಗ ಇಲ್ಲದಿದ್ದರೆ ಮಾತ್ರ ನಾವು ಕೊಡುತ್ತೇವೆ. ಆದರ ಜೀರೆ ಯಾರದ್ದೋ ಹೆಸರಿನಲ್ಲಿ ಜಾಗ ಇದ್ದರೆ ಅವರಿಗೆ ಕೊಡುವುದಕ್ಕೆ ಬರುವುದಿಲ್ಲ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ:- ಇಲ್ಲಿ ಸಮಸ್ಯೆ ಏನೆಂದರೆ, ಒಂದು ಮೀನುಗಾರರ ಕುಟುಂಬದಲ್ಲಿ ಸಹಕಾರಸಂಘದ ಸದಸ್ಯತ್ವವನ್ನು ಹೊಂದಿರುವವರು ಸಮುದ್ರದಲ್ಲಿ ದುಡಿಯತಕ್ಕವರು. ಅವರ ಮನೆಯ ಹೆಂಗಸರ ಹಸರಿನಲ್ಲಿ ಭೂಮಿ ಇದ್ದರೆ ಅವರಿಗೆ ಕೊಡುವುದಕ್ಕಾಗುತ್ತದಯೇ? ಅಥವಾ ಇಲ್ಲವೇ?

ಶ್ರೀ ಎ. ಎಂ. ಬೆಳ್ಳಿಯಪ್ಪ:- ಹೆಂಗಸರು ಮೀನುಗಾರರಾಗಿದ್ದರೆ, ಅವರು ಸದಸ್ಯರಾಗಿದ್ದರೆ ನಾವು ಕೊಡುತ್ತೇವೆ.

ಮುಂಡರಗಿ ತಾಲ್ಲೂಕಿನಲ್ಲಿ ತೋಟಗಾರಿಕೆ ಫಾರಂಗೆ ತುಂಗಭದ್ರ ನದಿಯಿಂದ ನೀರು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ ೩೫೧ (೧೬೪೩)ಶ್ರೀ ಕೆ. ಹೆಚ್. ಕುರಡಗಿ ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಆ) ಮುಂಡರಗಿ ತಾಲ್ಲೂಕಿನಲ್ಲಿ ತೋಟಗಾರಿಕೆ ಫಾರಂ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ ಅಲ್ಲಿನ ನೀರಿನ ಸೌಕರ್ಯ ಕಡಿಮೆ ಇರುವುದರಿಂದ ತುಂಗಭದ್ರಾ ನದಿಯಿಂದ ನೀರು ಪೂರೈಸುವ ಯೋಜನೆ ಇದೆಯೇ;

ಆ) ಈಗ ಇರುವ ನೀರಿನಿಂದ ಭೂಮಿಯು ಸವಳಾಗಿ ಗಿಡಗಳ ಅಭಿವೃದ್ಧಿ ಕುಂಠಿತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇಲ್ಲವಾದರೆ ಅಭಿವೃದ್ಧಿಗಾಗಿ ತುಂಗಭದ್ರಾ ಯೋಜನೆಯಿಂದ ನೀರು ಸರಬರಾಜು ಮಾಡಲಾಗುವುದೇ;

ಇ) ಗದಗ್ ತಾಲ್ಲೂಕಿನ ನಿಂಗನ ಕೆರೆಯ ಹತ್ತಿರ ಸರ್ಕಾರಿ ಜಮೀನು ಇದ್ದು ಅಲ್ಲಿ ತೋಟಗಾರಿಕೆ ಫಾರಂ ಮಾಡುವ ವಿಚಾರ ಸರ್ಕಾರದ ಗಮನದಲ್ಲಿದೆಯೇ;

ಈ) ಗದಗ್ ತೋಟಗಾರಿಕೆ ಫಾರಂ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯವರಿಗೆ ಕೊಡುವ ವಿಚಾರ ಇದೆಯೇ? ಹಾಗಿದ್ದಲ್ಲಿ ಈ ಫಾರಂಅನ್ನು ಗದಗ್ ನೀರು ಸರಬರಾಜಾಗಿರುವಂತಹ ಸಿಂಗಟಟನ ಕೆರೆಯ ಹತ್ತಿರಕ್ಕೆ ವರ್ಗಾಯಿಸಲಾಗುವುದೆ?

ಶ್ರೀ ಎಂ. ಎಸ್. ಆತ್ಮಾನಂದ (ತೋಟಗಾರಿಕೆ ರಾಜ್ಯ ಸಚಿವರು):-

ಆ) ಬಂದಿದೆ. ತುಂಗಭದ್ರಾ ನದಿಯಿಂದ ಈ ಕ್ಷೇತ್ರಕ್ಕೆ ನೀರು ಸರಬರಾಜು ಯೋಜನೆಯೊಂದನ್ನು ರೂಪಿಸಲಾಗಿದೆ.

ಆ) ಬಂದಿದೆ. ತುಂಗಭದ್ರಾ ನದಿಯಿಂದ ಈ ಕ್ಷೇತ್ರಕ್ಕೆ ನೀರು ಸರಬರಾಜು ಯೋಜನೆಯೋಂದನ್ನು ರೂಪಿಸಲಾಗಿದೆ.

ಇ) ಇಲ್ಲ.

ಈ) ಗದಗ್ ತೋಟಗಾರಿಕೆ ಫಾರಂನಲ್ಲಿ ಇರುವ ಸುಮಾರು ೨.೨೦ ಗುಂಟೆ ಜಮೀನನ್ನು ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗೆ ವರ್ಗಾಯಿಸುವ ಪ್ರಸ್ತಾಪ ಪರಿಶೀಲನೆಯಲ್ಲಿದೆ.